# ಕಾಡಿನಲ್ಲಿ ಪಯಣ

■ ನಾಗೇಶ ಜಿ. ವೈದ್ಯ

ಹೊರಟಿತು ಭರದಲಿ ಕೆಂಪನೆ ಕಾರು
ಕಾನನದೊಳಗಿನ ರಸ್ತೆಯಲಿ
ಅಪ್ಪ, ಅಮ್ಮ, ಪಿಂಕಿ, ಪುಟ್ಟ
ನಾಲ್ವರೆ ಇದ್ದರು ಕಾರಲ್ಲಿ

ಜಿಂಕೆಯ ಮರಿಗಳು ಜಿಗಿಯುತ ಬಂದವು
ತಮ್ಮಯ ತಾಯಿಯ ಅನುಸರಿಸಿ
ಒಂದೇ ಗುಂಪಲಿ ರಸ್ತೆ ದಾಟಿದವು
ಒಗ್ಗಟ್ಟಿನ ಘನತೆಯ ನಿರೂಪಿಸಿ

ದಾರಿಯುದ್ದಕ್ಕೂ ಝುಳು ಝುಳು ಚಿಲುಮೆಯು
ಕಣ್ಮನ ಸೆಳೆಯುವ ಜಲಪಾತ
ಮರಗಳ ಗಾಳಿ, ಹೂಗಳ ಘಮ ಘಮ
ಪಕ್ಷಿಯ ಕಲರವ ಸಂಗೀತ



ಮಂಜುನಾಥ ಹುಲಕೊಪ್ಪ

ಕೇಳಲು ಗರ್ಜನೆ ನಿಂತಿತು ಕಾರು
ಎದೆಯಲ್ಲಿ ಢವ ಢವ ಸದ್ದು
ಕಾರಿನ ಎದುರೇ ಬಂದು ನಿಂತವು
ಸಿಂಹದ ಮರಿಗಳು ಐದು

ದೇವರ ಸ್ಮರಿಸುತ ತುಟಿಗಳ ಕಚ್ಚಿ
ನೋಡುತ ಕುಳಿತೆವು ಬೆರಗಾಗಿ
ಚಲನೆಯೆ ಇಲ್ಲದ ನಮ್ಮನು ನೋಡಿ
ಹಿಂದಿರುಗಿದವವು ತಾವಾಗಿ

ವೇಗದಿ ಅಪ್ಪನು ಓಡಿಸೆ ಕಾರು
ಬೇಗನೆ ಬಂದಿತು ಊರು
ನಮ್ಮಯ ಪಯಣದ ಕತೆಯನು ಹೇಳಿ
ರೋಚಕವೆಂದರು ಸ್ನೇಹಿತರು

## ಕುಂಚ ಪ್ರಪಂಚ





**ಮಿಹಿರಾ ವಿನಯ್**
3ನೇ ತರಗತಿ,
ನ್ಯಾಷನಲ್ ಪಬ್ಲಿಕ್
ಸ್ಕೂಲ್ ರಾಜಾಜಿನಗರ
ಬೆಂಗಳೂರು





**ಶ್ರೀಕಾಂತ್**
3ನೇ ತರಗತಿ,
ಅರುಣೋದಯ ಪಬ್ಲಿಕ್
ಸ್ಕೂಲ್ ಥಾಣೆ, ಮಹಾರಾಷ್ಟ್ರ

### ಒಗಟುಗಳು

- ಬಡ ಬಡ ಬಂದ ಅಂಗಿ ಕಳಚಿದ ಬಾವಿಗೆ ಹಾರಿದ.
- ಚೋಟುದ್ದ ಹುಡುಗಿಗೆ ಮಾರುದ್ದ ಸೆರಗು.
- ಗೂಡಿನಲ್ಲೇ ಜೋಡಿ ಪಕ್ಷಿ ಊರೆಲ್ಲ ನೋಡುತ್ತವೆ.

ಉತ್ತರಗಳು
ಬಾಳೆಹಣ್ಣು
ಸೌಟು
ಕಣ್ಣು

ಸಂಗ್ರಹ: ನಿರ್ಮಲಾ ಹಂಜಿ